ಇಲಾಖೆ / ವಿಷಯ : DEPARTMENT / SUBJECT: 14 ಕಾರ್ಮಿಕರು
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE 21/4/2021

## ಕಠಿಣ ನಿಯಮ ಘೋಷಿಸಿದ ಬೆನ್ನಲ್ಲೇ ವಲಸೆ ಶುರು | ಖಾಸಗಿ ಬಸ್‌ಗಳನ್ನೇ ನೆಚ್ಚಿಕೊಂಡ ಪ್ರಯಾಣಿಕರು

# ರಾಜಧಾನಿ ತೊರೆದು ಊರಿನತ್ತ ವಲಸಿಗರು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಹರಡುವುದನ್ನು ತಡೆಯುವ ಸಲುವಾಗಿ ರಾಜ್ಯ ಸರ್ಕಾರ ಹಲವು ಕಠಿಣ ನಿಯಮ ಘೋಷಿಸಿದ ಹಿನ್ನೆಲೆಯಲ್ಲಿ ವಲಸೆ ಕಾರ್ಮಿಕರು ಸೇರಿ ಇತರರು ಮಂಗಳವಾರ ರಾತ್ರಿಯೇ ತಮ್ಮ ಊರುಗಳತ್ತ ತೆರಳಿದರು. ಇದರಿಂದಾಗಿ ಕೆಂಪೇಗೌಡ ಕೇಂದ್ರ ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ಜನಸಂದಣಿ ಹೆಚ್ಚಾಗಿತ್ತು.

ದಿನದಿಂದ ದಿನಕ್ಕೆ ಕರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ಅದರ ನಿಯಂತ್ರಣಕ್ಕೆ ಈಗಾಗಲೇ ಬೆಂಗಳೂರು ಸೇರಿ ರಾಜ್ಯದ 8 ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಇದೀಗ ಸೋಂಕು ಹರಡುವ ಕೊಂಡಿಯನ್ನು ಕಳಚುವ ಸಲುವಾಗಿ ರಾಜ್ಯಾದ್ಯಂತ ಏಕರೂಪ ನಿಯಮ ಜಾರಿಗೊಳಿಸಲಾಗಿದೆ. ಅದರಲ್ಲೂ ಬೆಂಗಳೂರಿನಲ್ಲಿ ರಾತ್ರಿ ಕರ್ಫ್ಯೂ ಅವಧಿ ಹೆಚ್ಚಿಸಲಾಗಿದೆಯಲ್ಲದೆ, ಹಲವು ಉದ್ಯಮಗಳ ಚಟುವಟಿಕೆಗಳಿಗೆ ನಿಯಂತ್ರಣ ಹೇರಲಾಗಿದೆ. ಅದರ ಪರಿಣಾಮ ನಗರದಲ್ಲಿದ್ದ ವಲಸಿಗರು ತಮ್ಮ ಊರುಗಳತ್ತ ಪ್ರಯಾಣ ಬೆಳೆಸುತ್ತಿದ್ದಾರೆ.

**ವರ್ಕ್ ಫ್ರಂ ಹೋಂ ಪರಿಣಾಮ:** ಐಟಿ-ಬಿಟಿ ಉದ್ಯಮ ಸೇರಿ ಖಾಸಗಿ ಸಂಸ್ಥೆಗಳಲ್ಲಿ ಶೇ.50 ಉದ್ಯೋಗಿಗಳನ್ನು ಬಳಸಿ, ಉಳಿದವರಿಗೆ ವರ್ಕ್ ಫ್ರಂ ಹೋಮ್‌ಗೆ ಸೂಚಿಸಲಾಗಿದೆ. ಅದರ ಪರಿಣಾಮ ಐಟಿ-ಬಿಟಿ ಉದ್ಯೋಗಿಗಳು ಸಹ ಊರುಗಳತ್ತ ತೆರಳಿದ್ದಾರೆ.

### ಬಸ್‌ಗಳಿಗಾಗಿ ಪರದಾಟ

ಸಾರಿಗೆ ನೌಕರರ ಮುಷ್ಕರ ಇರುವ ಕಾರಣದಿಂದಾಗಿ ಸೋಮವಾರ ರಾತ್ರಿ ಊರಿಗೆ ತೆರಳಲು ಬಸ್ ನಿಲ್ದಾಣಕ್ಕೆ ಬಂದವರು ಸಮಸ್ಯೆ ಎದುರಿಸುವಂತಾಯಿತು. ಅದರಲ್ಲೂ ಸರ್ಕಾರಿ ಬಸ್‌ಗಳು ಸಮರ್ಪಕವಾಗಿ ಇಲ್ಲದ ಕಾರಣ, ನಗರದ ವಿವಿಧ ಬಸ್ ನಿಲ್ದಾಣಗಳಿಗೆ ಹರಸಾಹಸ ಪಟ್ಟು ತೆರಳಿ ಖಾಸಗಿ ಬಸ್‌ಗಳ ಮೂಲಕ ಜನರು ಪ್ರಯಾಣಿಸಿದರು.

ವಿಜಯವಾಣಿ
ದಿಗ್ವಿಜಯ 24X7 NEWS
ಇವರ ಸಹಯೋಗದೊಂದಿಗೆ
kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ಸಮಗ್ರ ಮಾಹಿತಿ 70928 77888, ನೋಂದಣಿ ಉಚಿತ


ವಿಜಯವಾಣಿ ಚಿತ್ರ

ಊರುಗಳಿಗೆ ಹೋಗಲು ಗೊರಗುಂಟೆಪಾಳ್ಯದಲ್ಲಿ ವಾಹನಗಳಿಗೆ ಕಾಯುತ್ತಿರುವ ಜನ.

### ರೈಲಿನಲ್ಲಿ ವಲಸೆ ಕಾರ್ಮಿಕರು

ಕರೊನಾ ಸೋಂಕಿನ ಪರಿಣಾಮ ಕಡಿಮೆಯಾದ ಕಾರಣ ಹೊರರಾಜ್ಯಗಳಿಂದ ಕೆಲಸ ಅರಸಿ ಬೆಂಗಳೂರಿಗೆ ಬಂದಿದ್ದವರು ಮತ್ತೆ ವಾಪಸ್ ತೆರಳುತ್ತಿದ್ದ ದೃಶ್ಯ ಕಂಡುಬಂತು. ಹೀಗಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವಂತಾಗಿತ್ತು. ಆದರೆ, ವಾರದ ದಿನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಯಾವುದೇ ನಿರ್ಬಂಧ ಹೇರದ ಕಾರಣ ನಿರ್ಮಾಣ ಕಾರ್ಮಿಕರು ನಗರ ತ್ಯಜಿಸಿದ ಪ್ರಮಾಣ ಕಡಿಮೆಯಿದೆ.

## ಹೋಂ ಐಸೋಲೇಷನ್ ಮಾರ್ಗಸೂಚಿ ಪ್ರಕಟ

ಬೆಂಗಳೂರು: ರಾಜ್ಯದಲ್ಲಿ ಕರೊನಾ ಸೋಂಕಿನ ಗುಣಲಕ್ಷಣಗಳಿಲ್ಲದವರನ್ನು ಮತ್ತು ಸೌಮ್ಯ ಲಕ್ಷಣ ಹೊಂದಿರುವವರು ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆಯಲು ರಾಜ್ಯ ಆರೋಗ್ಯ ಇಲಾಖೆ ಷರತ್ತುಬದ್ಧ ಅವಕಾಶ ಕಲ್ಪಿಸಿದೆ.

» **ದೂರವಾಣಿ ಮೂಲಕ ವೈದ್ಯರ ಸಲಹೆ ಪಡೆಯುವ ವ್ಯವಸ್ಥೆ**

ಸ್ವಲ್ಪ ಜ್ವರ (38 ಡಿಗ್ರಿ ಸೆಲ್ಸಿಯೆಸ್‌ಕ್ಕಿಂತ ಕಡಿಮೆ ಉಷ್ಣತೆ), ಆಮ್ಲಜನಕ ಮಟ್ಟ 95 ಅಥವಾ ಹೆಚ್ಚು ಇದ್ದವರಿಗೆ ಮಾತ್ರ ಹೋಮ್ ಐಸೊಲೇಷನ್ ಅವಕಾಶ ಸಿಗಲಿದೆ. ಮನೆಯಲ್ಲಿ ಪ್ರತ್ಯೇಕವಾಗಿರಲು ವ್ಯವಸ್ಥೆ ಇರಬೇಕು. ರೋಗಿಯ ಮೇಲೆ ಸದಾ ನಿಗಾ ಇಡಲು ಒಬ್ಬ ವ್ಯಕ್ತಿ ಲಭ್ಯ ಇರಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

**ವೈದ್ಯರ ಅನುಮತಿ ಅಗತ್ಯ:** ಪ್ರಸವಕ್ಕೆ 2 ವಾರ ಇರುವ ಗರ್ಭಿಣಿಯರಿಗೆ ಹೋಮ್ ಐಸೋಲೇಷನ್ ಅವಕಾಶ ಇಲ್ಲ. ವೈದ್ಯರು ಅನುಮತಿ ನೀಡಿದರೆ ಬಾಣಂತಿಯರು ಹೋಮ್ ಐಸೋಲೇಷನ್‌ನಲ್ಲಿ ಇರಬಹುದು. ಪ್ರತ್ಯೇಕ ಕೊಠಡಿ, ಪ್ರತ್ಯೇಕ ಶೌಚಗೃಹ ಇರುವುದು ಕಡ್ಡಾಯ. ಹಿರಿಯ ನಾಗರಿಕರು, ಪೂರ್ವ ಕಾಯಿಲೆ ಇರುವವರಿಂದ ಸದಾ ಅಂತರ ಕಾಪಾಡಬೇಕು ಎಂದು ಮಾರ್ಗಸೂಚಿ ತಿಳಿಸಿದೆ. ಕೋವಿಡ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿಯು ಸತತ ಮೂರು ದಿನಗಳಿಂದ ಕೋವಿಡ್‌ನ ರೋಗಲಕ್ಷಣ ಹೊಂದಿಲ್ಲದಿದ್ದರೆ, ಸತತ ನಾಲ್ಕು ದಿನಗಳಿಂದ ಆಮ್ಲಜನಕದ ಮಟ್ಟ 95ಕ್ಕಿಂತ ಹೆಚ್ಚಿದ್ದರೆ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಬಹುದು.